ಪ್ರಸ್ತುತ ಮಕ್ಕಳ ಮಾನಸಿಕ ವರ್ತನೆಯಿಂದ ತಾಯಂದಿರಿಗೆ ತೊಂದರೆ

೯೨೯ (೧೩೩೯) ಶ್ರೀ ಎ. ಕೆ. ಅನಂತ ಕೃಷ್ಣ (ಶಿವಾಜಿನಗರ). — ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:—

ಅ) ಪ್ರಸ್ತುತ ಮಕ್ಕಳ ಮಾನಸಿಕ ವರ್ತನೆಯಿಂದ ಸರಿಯಾಗಿ ಆಹಾರ ತೆಗೆದುಕೊಳ್ಳದೇ ಇದ್ದು ಇದರಿಂದ ತಾಯಂದಿರಿಗೆ ಮತ್ತು ಪೋಷಕರಿಗೆ ಭರಿಸಲಾದ ಮಾನಸಿಕ, ದೈಹಿಕ ಹಾಗೂ ಸಾಮಾಜಿಕ ಒತ್ತಡ ಉಂಟಾಗಿರುವುದರಿಂದ ಆರೋಗ್ಯಕ್ಕೆ ಕಂಟಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ ಮಕ್ಕಳ ಸಹಾಯಕ್ಕಾಗಿ ಹಾಗೂ ತಾಯಂದಿರನ್ನು ಒತ್ತಡದಿಂದ ಮುಕ್ತ ಮಾಡಲು ಶಿಕ್ಷಣ ನೀಡುವ ಬಗ್ಗೆ ಸರ್ಕಾರ ತೆಗೆದುಕೊಳ್ಳಲು ಉದ್ದೇಶಿಸಿರುವ ಕ್ರಮಗಳೇನು ?

ಶ್ರೀಮತಿ ಪುನೋರಮಾ ಮುಧ್ವರಾಜ್ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು).

ಅ) ಇಲ್ಲ.

ಆ) ಉದ್ಭವಿಸುವುದಿಲ್ಲ.

ವಿಶೇಷ ಘಟಕ ಯೋಜನೆಯಡಿಯಲ್ಲಿ ಕಳೆದ ೩ ವರ್ಷಗಳಲ್ಲಿ ನೀರಾವರಿ ಕೊಳವೆ ಬಾವಿಗಳನ್ನು ಕೊರಿಸಿರುವ ಬಗ್ಗೆ

೯೩೦ (೬೯೧) ಶ್ರೀ ಪಿ. ಜಿ. ಆರ್. ಸಿಂಧ್ಯಾ (ಕನಕಪುರ).—ಮಾನ್ಯ ಸಮಾಜ ಕಲ್ಯಾಣ, ಗಣಿ ಮತ್ತು ಭೂ ವಿಜ್ಞಾನ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ:—

ಅ) ಕಳೆದ ೩ ವರ್ಷಗಳಲ್ಲಿ ವಿಶೇಷ ಘಟಕ ಯೋಜನೆಯಡಿಯಲ್ಲಿ ಮಂಜೂರು ಮಾಡಲ್ಪಟ್ಟ ನೀರಾವರಿ ಕೊಳವೆ ಬಾವಿಗಳ ಸಂಖ್ಯೆ ?

ಆ) ಅವುಗಳಲ್ಲಿ ವಿದ್ಯುದೀಕರಣಗೊಳಿಸಲ್ಪಟ್ಟ ಬಾವಿಗಳ ಸಂಖ್ಯೆ ?

ಇ) ಅವುಗಳಲ್ಲಿ ಸರಿಯಾಗಿ ಕಾರ್ಯ ನಿರ್ವಹಿಸುತ್ತಿರುವ ಬಾವಿಗಳೆಷ್ಟು ?

ಶ್ರೀ ಎಂ. ವೀರಪ್ಪ ಮೊಯ್ಲಿ (ಯೋಜನಾ, ಕಾನೂನು, ಸಂಸದೀಯ ವ್ಯವಹಾರಗಳ ಮತ್ತು ಪ್ರವಾಸೋದ್ಯಮ ಸಚಿವರು)(ಸಮಾಜ ಕಲ್ಯಾಣ, ಗಣಿ ಮತ್ತು ಭೂ ವಿಜ್ಞಾನ ಸಚಿವರ ಪರವಾಗಿ). —

೧೯೮೬–೮೮	೧೯೮೮–೯೯	೧೯೮೯–೯೦	ಒಟ್ಟು
೧೪೦೨	೨೦೩೧	೮೨೬	೪೬೫೯
೧೨೬೫	೨೬೮	೪೪೫	೧೯೭೮
೧೨೨೪	೨೬೪	೪೪೫	೧೯೩೩

ಬೀದರ್ ಜಿಲ್ಲಾ ಆಸ್ಪತ್ರೆಯಲ್ಲಿ ಐ. ವಿ. ಫ್ಲೂಯಿಡ್ ಪ್ಲಾಂಟ್ ಯಶಸ್ವಿಯಾಗಿ ಕೆಲಸ ಮಾಡದಿರುವುದು

೯೩೨ (೧೪೧೧ ಬಿ) ಶ್ರೀ ನಾರಾಯಣ ರಾವ್ ಮನಹಳ್ಳಿ (ಬೀದರ್).—ಮಾನ್ಯ ಆರೋಗ್ಯ ಹಾಗೂ ಕುಟುಂಬ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ:

ಅ) ಬೀದರ್ ಜಿಲ್ಲಾ ಆಸ್ಪತ್ರೆಯಲ್ಲಿ ಐ. ವಿ. ಫ್ಲೂಯಿಡ್ ಪ್ಲಾಂಟ್ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಆ) ಹಾಗಿದ್ದಲ್ಲಿ, ಅದು ಯಶಸ್ವಿಯಾಗಿ ಕಾರ್ಯನಿರ್ವಹಿಸುತ್ತಿದೆಯೇ ?

ಇ) ಇಲ್ಲದಿದ್ದಲ್ಲಿ, ಸರ್ಕಾರವು ಈ ಬಗ್ಗೆ ತೆಗೆದುಕೊಂಡ ಕ್ರಮವೇನು ?